‘ನಾವಿಬ್ಬರು, ನಮಗೊಬ್ಬರೂ ಇಲ್ಲ’

—ಮುಂದಿನ ದಿನಗಳಲ್ಲಿ ಮಸ್ತಿಗೆ ಬಂದ ಗಜರಾಜ ಮತ್ತು ಅವನ ಕಾಮಕೇಳಿಯ ಆಹ್ವಾನ ಸ್ವೀಕರಿಸಿದ ಗಜರಾಣಿ ಕೂಡುವಾಗ ಇಬ್ಬರೂ ಕಿವಿಯಲ್ಲಿ ಉಸುರುವ ಮಾತು ಇದೇ ಆಗಿರಬಹುದು! ಏಕೆಂದರೆ, ಆನೆಗಳ ಸಂಕುಲಕ್ಕೂ ಕುಟುಂಬ ಯೋಜನೆಯನ್ನು ಜಾರಿಗೆ ತರುವ ಪ್ರಯತ್ನಗಳು ಇದೀಗ ಆರಂಭವಾಗಿವೆ! ‘ಆನೆಗಳ ಸಂಖ್ಯೆ ಒಂದೇ ಸಮನೆ ಏರುತ್ತಿದೆ. ಕಾಡಿನಲ್ಲಿ ಜಾಗವಿಲ್ಲ, ಊರಿಗೆ ನುಗ್ಗುವುದನ್ನು ತಡೆಯಲಾಗುತ್ತಿಲ್ಲ. ಹಾಗಾಗಿ ನಸ್‌ಬಂದಿ ಒಂದೇ ದಾರಿ’ ಎಂದು ಅರಣ್ಯ ಇಲಾಖೆಗೆ ಸಂಬಂಧಿಸಿದ ಅಧಿಕಾರಿಗಳು ಗಟ್ಟಿಧ್ವನಿಯಲ್ಲಿ ಹೇಳುತ್ತಿದ್ದಾರೆ.

‘ಕಾಡಿನಲ್ಲಿ ಅದೆಂತಹ ಕುಟುಂಬ ಯೋಜನೆ?’ ಎಂದು ತಲೆ ಕೆರೆದುಕೊಳ್ಳುತ್ತಿದ್ದೀರಾ? ಏನಿಲ್ಲ, ಗಜಪಡೆಯ ಜನನ ನಿಯಂತ್ರಣಕ್ಕಾಗಿ ಹೆಣ್ಣಾನೆಗಳಿಗೆ ಗರ್ಭನಿರೋಧಕ ಚುಚ್ಚುಮದ್ದು ನೀಡಲು ಅರಣ್ಯ ಇಲಾಖೆಯು ಯೋಜನೆಯೊಂದನ್ನು ರೂಪಿಸುತ್ತಿದೆ. ‘ರಾಜ್ಯದಲ್ಲಿ ಆನೆಗಳ ಸಂಖ್ಯೆ ಹೆಚ್ಚಾಗಿದ್ದು, ಅವುಗಳ ಒಳಿತಿಗಾಗಿಯೇ ಜನನ ನಿಯಂತ್ರಣ ಯೋಜನೆಯನ್ನು ರೂಪಿಸಿದ್ದೇವೆ. ಇದರಿಂದ ಮಾನವ– ಆನೆ ಸಂಘರ್ಷ ತಗ್ಗಿಸಲು ಸಹ ಸಾಧ್ಯವಾಗಲಿದೆ’ ಎನ್ನುತ್ತಾರೆ ಅರಣ್ಯ ಇಲಾಖೆಯ ಅಧಿಕಾರಿಗಳು.

ಅಧಿಕಾರಿಗಳ ಸಬೂಬು ಏನೇ ಆಗಿರಬಹುದು. ಬಲವಂತದಿಂದ ಕುಟುಂಬ ಯೋಜನೆಗೆ ಒಳಗಾಗುವ ಆನೆಗಳು, ‘ಮನುಷ್ಯರಿಗಾದರೆ ಆರತಿಗೊಬ್ಬ ಮಗಳು, ಕೀರ್ತಿಗೊಬ್ಬ ಮಗ; ಅದೇ ನಮ್ಮ ವಿಷಯದಲ್ಲಾದರೆ ನೀವಿಬ್ಬರು, ನೀವಿಬ್ಬರೇ ಎಂಬ ನೀತಿಯೇ’ ಎಂದು ಸಿಟ್ಟಾಗಲೂಬಹುದು, ಅಲ್ಲವೆ? ಆದರೆ, ಅವುಗಳ ಪಾಲಿಗೆ ಒಂದು ಸಮಾಧಾನದ ವರ್ತಮಾನ ಕೂಡ ಇದೆ. ಅದೇನೆಂದರೆ ಅರಣ್ಯ ಇಲಾಖೆಯು ನೀಡಲು ಹೊರಟಿದ್ದು ನಿರ್ದಿಷ್ಟ ಅವಧಿಯಲ್ಲಿ ಗರ್ಭಧಾರಣೆ ಆಗದಂತಹ ಚುಚ್ಚುಮದ್ದನ್ನೇ ಹೊರತು, ಶಾಶ್ವತವಾಗಿ ಸಂತಾನವೇ ಆಗದಂತಹ ಶಸ್ತ್ರ ಚಿಕಿತ್ಸೆಯನ್ನೇನಲ್ಲ.

ಸರ್ಕಾರದ ದಾಖಲೆಗಳ ಪ್ರಕಾರ, ಸದ್ಯ ರಾಜ್ಯದಲ್ಲಿರುವ ಆನೆಗಳ ಸಂಖ್ಯೆ 8,976. ಹೀಗಾಗಿ ಜಾತ್ರೆ ಸಮಯದಲ್ಲಿ ನಮ್ಮ ಮನೆಗಳು ನೆಂಟರಿಂದ ತುಂಬಿ ತುಳುಕುವಂತೆ ಆನೆಗಳ ‘ಗೃಹ ವಲಯ’ಗಳೆಲ್ಲ ಈಗ ಕಿಕ್ಕಿರಿದು ತುಂಬಿವೆಯಂತೆ. ಇದೇ ಕಾರಣದಿಂದ ಕಾಡಿನಲ್ಲಿ ಅವುಗಳಿಗೆ ಆರಾಮವಾಗಿ ವಾಸಿಸಲಾಗದೆ, ಸಮೃದ್ಧ ‘ಊಟದ ತಾಕು’ ಇರುವಂತಹ ತಾಣಗಳನ್ನು ಹುಡುಕಿಕೊಂಡು ನಾಡಿನತ್ತ ನುಗ್ಗುತ್ತಿವೆಯಂತೆ. ಸಂಘರ್ಷದ ಈ ಹಾದಿಯನ್ನು ಅಳಿಸಲು ಆನೆಗಳ ಜನನ ನಿಯಂತ್ರಣ ಅತ್ಯವಶ್ಯ ಎನ್ನುವುದು ಅಧಿಕಾರಿಗಳ ವಾದ.

ಕಾಡಿನ ಸ್ಥಳಾಭಾವದ ಸಮಸ್ಯೆಯನ್ನು ಅವರೊಂದು ರೂಪಕದ ಮೂಲಕ ವಿವರಿಸುತ್ತಾರೆ. ‘ಅಪ್ಪ–ಅಮ್ಮ ಮತ್ತು ಇಬ್ಬರು ಮಕ್ಕಳಿರುವ ಕುಟುಂಬವೊಂದಿದೆ ಹಾಗೂ ಅದಕ್ಕೆ 600 ಚದರ ಅಡಿಯಷ್ಟು ವಿಸ್ತೀರ್ಣದ ಒಂದು ಪುಟ್ಟ ಮನೆಯಿದೆ ಎಂದಿಟ್ಟುಕೊಳ್ಳೋಣ. ಆ ಕುಟುಂಬದ ಇಬ್ಬರು ಮಕ್ಕಳಿಗೆ ಮದುವೆಯಾಗಿ, ಅವರಿಗೂ ಒಂದೊಂದು ಮಗುವಾದಾರೆ ಒಟ್ಟು

**ಸದ್ಯ ರಾಜ್ಯದಲ್ಲಿರುವ ಆನೆಗಳ ಸಂಖ್ಯೆ 8,976. ಜಾತ್ರೆ ಸಮಯದಲ್ಲಿ ಮನೆಗಳು ನೆಂಟರಿಂದ ತುಂಬಿ ತುಳುಕುವಂತೆ ಆನೆಗಳ ‘ಗೃಹ ವಲಯ’ಗಳೆಲ್ಲ ಈಗ ಕಿಕ್ಕಿರಿದು ತುಂಬಿವೆ!**



ಬಂಡೀಪುರದಲ್ಲಿ ಒಂಟಿ ಸಲಗ

ನದಿ ದಾಟುತ್ತಿರುವ ಆನೆಗಳು

